# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಸಿ.ಸಿ ನಂ. 1233-2016** **ಪಿ. ಡಬ್ಲ್ಯು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಟಿ.ಎನ್.ಮಧಸೂದನ್<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 08-02-2021. |

**ಪಾಟೀ ಸವಾಲು: ಶ್ರೀ ಎಂ.ಇ.ಎಂ ವಕೀಲರಿಂದ:**

ನಾನು ಪತ್ರಕರ್ತನಾಗುವ ಮೊದಲು ವಿದ್ಯಾಭ್ಯಾಸ ಮಾಡುತ್ತಿದ್ದೆ ಸಾಕ್ಷಿ ಮುಂದುವರೆದು ನಾನು ನನ್ನ ದ್ವಿತಿಯ ಪಿ.ಯು.ಸಿ ಆದ ನಂತರ 2 ವರ್ಷದಿ ಜರ್ನಲಿಸಂ ತರಬೇತಿ ಮುಗಿಸಿದ ತಕ್ಷಣ ನಾನು ಪತ್ರಕರ್ತನಾಗಿ ಕೆಲಸ ಮಾಡತ್ತಿದ್ದೇನೆ ಈಗ್ಗೆ ಸುಮಾರು 30 ವರ್ಷಗಳಿಂದ ನಾನು ಸದರಿ ಕೆಲಸ ಮಾಡುತ್ತಿದ್ದೇನೆ ಹಾಗೂ ಈ ಸಂಬಂಧ ನನ್ನ ಬಳಿ ದಾಖಲೆಗಳು ಇವೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

2. ಆರೋಪಿ ನನಗೆ 15 ವರ್ಷಗಳಿಂದ ಪರಿಚಿತರಿರುತ್ತಾರೆ. ನಾನು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ 25 ವರ್ಷಗಳಿಂದ ನಂಜಗೂಡು ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದೇನೆ, ಅದೇ ರೀತಿ ಆರೋಪಿ ಸದರಿ ದಿನ ಪತ್ರಿಕೆಯ ಬೆಂಗಳೂರು ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದರು. ಈ ಸಂಬಂಧ ನನ್ನ ಬಳಿ ದಾಖಲಾತಿಗು ಇವೆ. ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಆರೋಪಿ 2005 ರಿಂದ 2006 ರವರೆಗೂ ನಂಜನಗೂಡಿನಿಂದ ಚಂದಾ ವಸೂಲಿ ಹಣ ತೆಗೆದುಕೊಂದು ಹೋಗಲು ಬರುತ್ತಿದ್ದರು, ಆಗ ನನಗೆ ಪರಿಚಿತರಾಗಿರುತ್ತಾರೆ. ಚಂದಾ ಹಣವನ್ನು ನಗದು ರೂಪದಲ್ಲಿ ಆರೋಪಿಗೆ ನೀಡುತ್ತಿದ್ದೆ. ಈ ಸಂಬಂಧ ನಮ್ಮ ಮುಖ್ಯ ಕಚೇಯವರು ದಾಖಲೆಯನ್ನು ನೀಡಿರುತ್ತಾರೆ. ಅದನ್ನು

ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಮೇಲೆ ಹೇಳಿದ ಚಂದಾ ವಸೂಲಿ ವ್ಯವಹಾರ ಬಿಟ್ಟರೆ ನನ್ನ ಹಾಗೂ ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಮ್ಮೊಮ್ಮೆ ಚಂದಾ ಹಣದಲ್ಲಿ ಕಡಿಮೆ ಇದ್ದಾಗ ಆ ವ್ಯತ್ಯಯದ ಹಣವನ್ನು ಆರೋಪಿ ಖಾತೆಗೆ ಜಮೆ ಮಾಡುವಂತೆ ಹೇಳಿ ಆರೋಪಿ ತನ್ನ ಬ್ಯಾಂಕ್ ಖಾತೆ ನಂಬರ್ ನ್ನು ನೀಡಿ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿ ತಿಂಗಳಿಗೆ ಒಂದು ಬಾರಿ ಮಾತ್ರ ಬಂದು ಚಂದಾ ಹಣ ತೆಗೆದುಕೊಂಡು ಹೋಗುತ್ತಿದ್ದರು. ಸಾಮಾನ್ಯವಾಗಿ ಚಂದಾ ಹಣ 10 ರಿಂದ 15 ಸಾವಿರ ಇರುತ್ತಿತ್ತು. 2006 ನೇ ಇಸವಿಯ ನಂತರ ಆರೋಪಿ ನನ್ನ ಕಡೆ ಚಂದಾ ಹಣ ವಸೂಲಿಗೆ ಬರುತ್ತಿರಲಿಲ್ಲ ಎಂದರೆ ಸರಿ.

3. ನಾನು ನನ್ನ ಪತ್ರಕರ್ತ ವೃತ್ತಿಯನ್ನಲ್ಲದೆ ನನಗೆ ಹೊಲ, ಗದ್ದೆಗಳು ಇದ್ದು ಅದರಿಂದಲೂ ನನಗೆ ಆದಾಯ ಬರುತ್ತದೆ. ಸುಮಾರು 2 ಎಕರೆ ಜಮೀನು ನನ್ನ ಹೆಸರಿನಲ್ಲಿ ಇದೆ ಈ ಸಂಬಂಧ ನನ್ನ ಬಳಿ ಆರ್.ಟಿ.ಸಿ ಸಹ ಇದ್ದು ನಾನು ಅದನ್ನು ಹಾಜರುಪಡಿಸುತ್ತೇನೆ. ನಾನು ನಂಜನಗೂಡಿನ ಎನ್.ಜಿ.ಒ ಕಾಲೋನಿಯಲ್ಲಿ ನನ್ನ ಸ್ವಂತ ಮನೆಯಲ್ಲಿ ವಾಸವಾಗಿದ್ದೇನೆ. ನನ್ನ ಕಚೇರಿ ನಂಜನಗೂಡಿನ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಹತ್ತಿರ ಇದೆ. ನನಗೆ ತಿಂಗಳಿಗೆ ಚಂದಾ ಹಣ ಎಲ್ಲಾ ಸೇರಿ ರೂ.25,000/– ಗಳಷ್ಟು ಆದಾಯ ಬರುತ್ತದೆ. ಚಂದಾ ಹಣ ವಸೂಲಿ ಆಗುವ ಪ್ರಮಾಣದ ಮೇಲೆ ನನಗೆ ತಿಂಗಳಿಗೆ ನನ್ನ ಮುಖ್ಯ ಕಚೆಯಿಂದ ಕಮಿಷನ್ ಬರುತ್ತದೆ. ನಾನು ನಂಜನಗೂಡಿನಲ್ಲಿ ಚಂದಾ ಹಣ ವಸೂಲಿ ಮಾಡಿ ಅದರಲ್ಲಿ ನನ್ನ ಕಮಿಷನ್ ಹಣ ಹಿಡಿದುಕೊಂಡು ಉಳಿದ ಹಣವನ್ನು ಮುಖ್ಯ ಕಚೇರಿಗೆ ಪಾವತಿ ಮಾಡುತ್ತೇನೆ. ಸಾಮಾನ್ಯವಾಗಿ ಚಂದಾ ಹಣದ ಮೇಲೆ 30% ಕಮೀಷನ್ ಇರುತ್ತದೆ.

4. ನಾನು ಪತ್ರಕರ್ತನಾಗಿ ಕೆಲಸ ಮಾಡತ್ತಿರುವುದಂರಿದ ನನಗೆ ವ್ಯವಹಾರದ ಜ್ಞಾನ ಚೆನ್ನಾಗಿರುತ್ತದೆ ಎಂದರೆ ಸರಿ. ನಂಜನಗೂಡಿನ ಎಸ್.ಬಿ.ಐ ಶಾಖೆಯಲ್ಲಿ ಈಗ್ಗೆ ಸುಮಾರು 20 ವರ್ಷಗಳಿಂದ ನನ್ನ ಉಳಿತಾಯ ಖಾತೆ ಇದ್ದು ಅದು ಈಗಲೂ ಚಾಲ್ತಿಯಲ್ಲಿದೆ ಹಾಗೂ ಅದೇ ರೀತಿ ಕೆನರಾ ಬ್ಯಾಂಕ್ ನಂಜನಗೂಡುನಲ್ಲಿಯೂ ಸಹ ಈಗ್ಗೆ 15 ವರ್ಷಗಳಿಂದ ನನ್ನ ಉಳಿತಾಯ ಖಾತೆ ಇದ್ದು ಅದು ಸಹ ಈಗಲೂಾ ಚಾಲ್ತಿಯಲ್ಲಿದೆ. 2006 ರ ನಂತರ ನನ್ನ ಹಾಗೂ ಆರೋಪಿ

ನಡುವೆ ಮೇಲೆ ಹೇಳಿದ ಚಂದಾ ಹಣದ ವ್ಯವಹಾರ ಇರಲಿಲ್ಲ ಆದರೆ ನನ್ನ ಅವರ ನಡುವೆ ಸ್ನೇತ ಇತ್ತು. ಆರೋಪಿ ತಾನು ಮಡಿಕೇರಿಯಿಂದ ಮಂಗಳೂರಿಗೆ ಹಾಲನ್ನು ಸರಬರಾಜು ಮಾಡುತ್ತಿರುವುದಾಗಿ ಹಾಗೂ ತಾನು ಹಾಲಿನ ವಾಹನವನ್ನು ಚಾಲನೆ ಮಾಡುವ ವೃತ್ತಿ ಮಾಡತ್ತಿದ್ದೇನೆ ಎಂದು ನನಗೆ ತಿಳಿಸಿದ್ದರು. ಈ ವಿಷಯವನ್ನು 2012 ನೇ ಇಸವಿಯಲ್ಲಿ ಆರೋಪಿ ನನಗೆ ತಿಳಿಸಿದರು. ನಾನು ಆರೋಪಿಯ ವಾಸ ಮಾಡುವ ಜಾಗಕ್ಕೆ ಹೋಗಿಲ್ಲ, ಆರೋಪಿಯೇ ನನ್ನ ಹತ್ತಿರ ಬರುತ್ತಿದ್ದರು. ಡಿಸೆಂಬರ್ 2012 ರಲ್ಲಿ ಆರೋಪಿ ನನ್ನ ಬಳಿ ಬಂದು ರೂ.5,00,000/- ಹಣ ನೀಡುವಂತೆ ಕೇಳಿಕೊಂಡನು. ಆಗ ನಾನು ಆರೋಪಿಗೆ ಯಾವುದೇ ಹಣ ನೀಡಿಲ್ಲ ಯಾಕೆಂದರೆ ಆಗ ನನ್ನ ಬಳಿ ಅಷ್ಟು ಮೊತ್ತದ ಹಣ ಇರಲಿಲ್ಲ. 2006 ರಿಂದ 2012 ಡಿಸೆಂಬರ್ ವರಗೊ ಆರೋಪಿ ನನ್ನ ಬಳಿ ಯಾವುದೇ ಹಣ ಕೇಳಿರಲಿಲ್ಲ ಎಂದರೆ ಸರಿ. ಮೇಲೆ ಹೇಳಿದಷ್ಟು ಹಣವನ್ನು ಸಾಲವಾಗಿ ನೀಡುವಂತೆ ನನಗೆ ಸತತ ಒಂದು ವರ್ಷಗಳ ಕಾಲ ಆರೋಪಿ ದೂರವಾಣಿ ಮುಖಾಂತರ ನಿವೇದಿಸಿಕೊಳ್ಳುತ್ತಿದ್ದರು ನಾನು ಅವರ ಮೊರೆ ಕೇಳಲಾಗದೆ ಒಮ್ಮೆ ಬಂದು ನನ್ನನ್ನು ಭೇಟಿ ಮಾಡಲು ಹೇಳಿದೆ. ಆರೋಪಿಯ ದೂರವಾಣಿ ಸಂಖ್ಯೆಗಳನ್ನು ನನಗೆ ಈಗ ಹೇಳಲು ನೆನಪಿಲ್ಲ. ನಾನು ಯಾರಾದರು ಬಂದು ಹಣ ಸಹಾಯ ಮಾಡುವಂತೆ ಕೇಳಿದರೆ ಅವರು ಜೆನ್ಯೂನ್ ಎನಿಸಿದರೆ ಹಣ ನೀಡುತ್ತಿದ್ದೆ. ಆ ರೀತಿ ನಾನು ಸುಮಾರ 7-8 ಜನರಿಗೆ ಸುಮಾರು ರೂ.5,000/-, ರೂ.10,000/-, ರೂ. 25,000/- ಹಾಗೂ ರೂ.50,000/- ಹಣ ನೀಡಿ ಸಹಾಯ ಮಾಡಿದ್ದೇನೆ. ಆ ಸಾಲಗಳೆಲ್ಲ ನನಗೆ ವಾಪಸ್ಸು ಮಾಡಿರುತ್ತಾರೆ. ಆರೋಪಿಯನ್ನು ನನ್ನ ಕಚೇರಿಗೆ ಬಂದು ಹಣ ಪಡೆದುಕೊಂಡು ಹೋಗುವಂತೆ ತಿಳಿಸಿದೆ. ನನ್ನ ಆರೋಪಿ ಕಡೆಯಿಂದ ಸಾಲದ ಬಾಬ್ತು ಯಾವುದೇ ದಾಖಲೆ ಗಳನ್ನು ಮಾಡಿಕೊಂಡಿಲ್ಲ. ಸಾಕ್ಷಿ ಮುಂದುವರೆದು ಆರೋಪಿ ನನಗೆ ಹಾಲಿನ ವಾಹನ ತೆಗೆದುಕೊಂಡ ನಂತರ ಕಮಿಷನ್ ನೀಡುವುದಾಗಿ ತಿಳಿಸಿದ್ದರು ಎಂದು ಸ್ವತಃ ನುಡಿಯುತ್ತಾರೆ. ನಾನು ಆರೋಪಿಗೆ ರೂ.2,50,000/- ನಗದು ಸಾಲವನ್ನು ನಾನು ಭತ್ತ ಮಾರಾಟ ಮಾಡಿ ಬಂದ ಹಣದಿಂದ ನೀಡಿರುತ್ತೇನೆ. ಈ ಮೇಲೆ ಹೇಳಿದ ವಿಚಾರವನ್ನು ನಾನು ನನ್ನ ಪಿರ್ಯಾದಿನಲ್ಲಾಗಲಿ, ನಿಪಿ-3 ರಲ್ಲಾಗಲಿ, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲಿ ಬರೆಸಿಲ್ಲ ಎಂದರೆ ಸರಿ. ಆರೋಪಿಗೆ

ಸದರಿ ಸಾಲ ನೀಡುವ ಕಾಲಕ್ಕೆ ನನ್ನ ಬಳಿ ಅಷ್ಟು ಹಣ ಇತ್ತು ಎಂದು ಹೇಳಲು ದಾಖಲೆಗಳು ಇವೆ ಅದನ್ನು ನಾನು ಕೊಡಬಲ್ಲೇ. ನನಗೆ ಆರೋಪಿಯ ಬ್ಯಾಂಕ್ ಖಾತೆಯ ನಂಬರ್ ಗೊತ್ತಿದ್ದರು ಸಹ ನಾನು ಸದರಿ ಸಾಲವನ್ನು ಆರೋಪಿಗೆ ಚೆಕ್ ಮೂಲಕವಾಗಲಿ ಅಥವಾ ಆರ್.ಟಿ.ಜಿ.ಎಸ್ ಮೂಲಕವಾಗಲಿ ನೀಡಿರುವುದಿಲ್ಲ ಎಂದರೆ ಸರಿ. ನಾನು ಆರೋಪಿಗೆ ಸಾಲ ನೀಡುವ ಕಾಲಕ್ಕೆ ಆತನ ಕಡೆಯವರೆಂದು 3 ಜನ ಬಂದಿದ್ದರು ಅವರು ಯಾರೆಂದು ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಸಾಲ ನೀಡಿದ ದಿನದಂದೇ ಆರೋಪಿ ನಿಪಿ-1 ರಲ್ಲಿ ಒಕ್ಕಣಿಕೆಗಳನ್ನು ಬರೆದು ಸಹಿ ಮಾಡಿ ನನಗೆ ನೀಡಿರುತ್ತಾರೆ. ನಾನು ಆರೋಪಿಗೆ ಸದರಿ ಸಾಲ ನೀಡುವ ಪೂರ್ವದಲ್ಲಿ ನಾನು ಆತನ ಆರ್ಥಿಕ ಪರಿಸ್ಥಿಯ ಬಗ್ಗೆ ತಿಳಿದುಕೊಂಡಿದ್ದೆ. ನಿಪಿ-1 ನ್ನು ಹೊರತುಪಡಿಸಿ ನನು ಆರೋಪಿ ಕಡೆಯಿಂದ ಬೇರೆ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಿಪಿ-1 ನ್ನು ಮೂರು ಬಣ್ಣದ ಶಾಹಿಯಿಂದ ಬರೆಯಲಾಗಿದೆ ಎಂದರೆ ಸರಿ. ನಿಪಿ-5 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿದೆ. ನಿಪಿ-5 ಬಾಬ್ತು ನನ್ನ ವಿರುದ್ಧ ಮಡಿಕೇರಿಯ ಹೆಚ್ಚುವರಿ ನ್ಯಾಯಾಲಯದಲ್ಲಿ ಪ್ರಕರಣದ ಸಂಖ್ಯೆ ಸಿ ಸಿ 406/2019 ರಂತೆ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿ.

(ಮುಂದುವರಿದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**